

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿಜೇತಾ ಹೊಸಮನಿ ಅವರಿಗೆ ಅಮ್ಮ, ಅಜ್ಜಿ ಮತ್ತು ಅಪ್ಪನಿಂದ ಅಭಿನಂದನೆ.

# ಸ್ತ್ರೀ ಸಬಲೀಕರಣಕ್ಕೆ ನನ್ನ ಪ್ರಥಮ ಪ್ರಾಶಸ್ತ್ಯ

**ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆ 2024ರಲ್ಲಿ 100ನೇ ರ್‍ಯಾಂಕ್ ಪಡೆದ ಕರ್ನಾಟಕದ ಅಭ್ಯರ್ಥಿ ವಿಜೇತಾ ಬಿ. ಹೊಸಮನಿ ಸಂದರ್ಶನ**

■ ರಾಘವೇಂದ್ರ ಕೆ.

◆ **ನಿಮ್ಮ ಊರು ಯಾವುದು? ನಾಗರಿಕ ಸೇವಾ ಪರೀಕ್ಷೆಗೆ ಮೊದಲು ನಿಮ್ಮ ವಿದ್ಯಾಭ್ಯಾಸದ ಬಗ್ಗೆ ಹೇಳಿ?**

ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯ ಜಾಲವಾದ ನನ್ನೂರು. ಅಮ್ಮ ಶಶಿಕಲಾ ನಾರಾಯಣರಾವ್ ಮುಳಗುಂದ. ಅಪ್ಪ ಭೀಮಸೇನ ಹೊಸಮನಿ ಬ್ಯಾಂಕ್ ಅಧಿಕಾರಿಯಾಗಿದ್ದರು. ಪ್ರಾಥಮಿಕ ಶಿಕ್ಷಣವನ್ನು ವಿಜಯಪುರದಲ್ಲಿ ಮಾಡಿದೆ. ಬಾಗಲಕೋಟೆ ಬಸವೇಶ್ವರ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಪ್ರೌಢಶಾಲೆ ಓದಿದೆ. ಪಿಯು ವಿಜ್ಞಾನ ಮುಗಿಸಿದ ನಂತರ ಕಾನೂನು ಕಲಿಯಬೇಕೆನ್ನುವ ಆಸೆ ಹುಟ್ಟಿತು. ಅದಕ್ಕೆ 'ಕಾಮನ್ ಲಾ ಟೆಸ್ಟ್' ಬರೆದೆ. ಗುಜರಾತ್‌ನ ಗಾಂಧಿನಗರದಲ್ಲಿರುವ 'ನ್ಯಾಷನಲ್ ಲಾ ಯೂನಿವರ್ಸಿಟಿ'ಯಲ್ಲಿ ಐದು ವರ್ಷದ ಬಿ.ಎ. ಎಲ್.ಎಲ್.ಬಿ.ಗೆ ಸೀಟು ಸಿಕ್ಕಿತು. ಸಮಾಜದ ಪ್ರತಿ ಕ್ಷೇತ್ರಕ್ಕೂ ಕಾನೂನು ಅಗತ್ಯ. ಲಾಯರ್ ಆಗಿದ್ದರೆ ಜನರಿಗೆ ಸಹಾಯ ಮಾಡಬಹುದು ಎಂದುಕೊಂಡು ಓದಿದೆ. ನನ್ನ ಸಹಪಾಠಿಗಳಿಬ್ಬರು ನಾಗರಿಕ ಸೇವಾ ಪರೀಕ್ಷೆಗೆ ಸಿದ್ಧತೆ ಮಾಡುತ್ತಿದ್ದರು. ಅವರಿಂದ ನನಗೆ ಆ ಬಗ್ಗೆ ತಿಳಿದುಕೊಳ್ಳಲು ಸಹಾಯ ಆಯಿತು. ಅದರಲ್ಲಿ ಏನೆಲ್ಲ ಅವಕಾಶ, ಸಾಧ್ಯತೆ ಇದೆ ಎನ್ನುವುದು ಗೊತ್ತಾದ ಮೇಲೆ ಯುಪಿಎಸ್‌ಸಿ ಬರೆಯಬೇಕೆಂದು ಯೋಚನೆ ಮಾಡಿದೆ. ಸಮಾಜದ ವಿವಿಧ ಹಂತದಲ್ಲಿ ಅನೇಕರಿಗೆ ನೆರವು ನೀಡಲು ಇಲ್ಲಿ ಸಾಧ್ಯವಿದೆ. ಕಾನೂನು ಆಸಕ್ತಿ ಇದ್ದರೂ ಆಡಳಿತ ಸೇವೆಗೆ ತಯಾರಿ ಮಾಡಿದೆ.

◆ **ಪರೀಕ್ಷೆ–ಸಂದರ್ಶನದ ಅನುಭವವನ್ನು ನಮ್ಮ ಓದುಗ ವರ್ಗದಲ್ಲಿನ ವಿದ್ಯಾರ್ಥಿಗಳಿಗಾಗಿ ಹಂಚಿಕೊಳ್ಳಬಹುದಾ?**

ಇದು ನನ್ನ 4ನೇ ಪ್ರಯತ್ನ. ಮೊದಲ ಮೂರರಲ್ಲಿ ಪೂರ್ವಭಾವಿ ಕೂಡ ಪಾಸಾಗಿರಲಿಲ್ಲ. ನಾಲ್ಕನೇ ಪ್ರಯತ್ನದಲ್ಲಿ ಪೂರ್ವಭಾವಿ ಜೊತೆ ಮುಖ್ಯಪರೀಕ್ಷೆ ಪಾಸಾಗಿ ಸಂದರ್ಶನಕ್ಕೆ ಹಾಜರಾದೆ. ನನ್ನ ಹಿಂದಿನ ವೈಫಲ್ಯಕ್ಕೆ ಕಾರಣಗಳನ್ನು ಕಂಡುಕೊಂಡೆ. ಪೂರ್ವಭಾವಿ ಪರೀಕ್ಷೆಯಲ್ಲಿ ಋಣಾತ್ಮಕ ಮೌಲ್ಯಮಾಪನ ಇರುತ್ತದೆ.